<u>ಹೆಚ್ಚುವರಿ ಸಿವಿಲ್ ಜಡ್ಜ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಹೊನ್ನಾವರ</u>

<u>ಸಿ.ಸಿ.ನಂ.**878/2022**</u>

ಪಿರ್ಯಾದುದಾರರು:- ವಿರುದ್ಧ ಆರೋಪಿತರು

ಮಂಕಿ ಪೋಲೀಸ್ ಧರ್ಮ ನಾರಾಯಣ ನಾಯ್ಕ
ಮತ್ತು ಇತರರು

# <u>ದೋಷಾರೋಪಣೆ</u>

ಶ್ರೀ , ಈ ರಣ್ಣ ಹುಣಶಿಕಟ್ಟಿ ಹೆಚ್ಚುವರಿ ಸಿವಿಲ್ ಜಡ್ಜ ಹಾಗೂ ಪ್ರಥಮ ದರ್ಜೆ_ಮತ್ತು ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾವರ ಆದ ನಾನು ನಿಮ್ಮ ಮೇಲೆ ಅಂದರೆ,

1. ಧರ್ಮ ತಂದೆ ನಾರಾಯಣ ನಾಯ್ಕ ,
   ವಯಸ್ಸು 38 ವರ್ಷ, ವ್ಯವಸಾಯ

2. ಮಂಜುನಾಥ ತಂದೆ ನಾರಾಯಣ ನಾಯ್ಕ ,
   ವಯಸ್ಸು 36 ವರ್ಷ, ವ್ಯವಸಾಯ

3. ನಾರಾಯಣ ತಂದೆ ಹೊನ್ನಾ ನಾಯ್ಕ ,
   ವಯಸ್ಸು 68 ವರ್ಷ, ಮನೆ ಕೆಲಸ,

4. ಅರುಣ ತಂದೆ ನಾಗಪ್ಪ ನಾಯ್ಕ,
   ವಯಸ್ಸು 68 ವರ್ಷ, ಮನೆ ಕೆಲಸ,

5. ಶ್ರೀಧರ ತಂದೆ ಜಟ್ಟಪ್ಪ ನಾಯ್ಕ,
   ವಯಸ್ಸು 47 ವರ್ಷ, ವ್ಯವಸಾಯ,

6. ನಾಗಪ್ಪ ತಂದೆ ಹೊನ್ನಾ ನಾಯ್ಕ ,
   ವಯಸ್ಸು 62 ವರ್ಷ, ವ್ಯವಸಾಯ,

7. ಭಾಸ್ಕರ ತಂದೆ ಮಂಜು ನಾಯ್ಕ,

ವಯಸ್ಸು 42 ವರ್ಷ, ವ್ಯವಸಾಯ

ಎಲ್ಲರೂ ವಾಸಃ ಹೊಸಹಿತ್ಲಕೇರಿ, ಬಳಕೂರು,
ಹೊನ್ನಾವರ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ.

## ನಿಮ್ಮ ಮೇಲೆ ಇರುವ ದೋಷಾರೋಪಣೆ ಇಂತಿದೆ.

ಮೊದಲನೇಯದಾಗಿ, ದಿನಾಂಕಃ 28/11/2021 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಮಂಕಿ ಪೋಲಿಸ್ ಠಾಣಾ ಸರಹದ್ದಿನ ಬಳಕೂರ ಗ್ರಾಮದ ಹೊಸಹಿತ್ಲದಲ್ಲಿ, ಸರ್ವೇ ನಂಬರ್ 137/7 ನೇದರಲ್ಲಿನ 33 ಗುಂಟೆ 08 ಆಣೆ ಜಾಗದಲ್ಲಿ ಆರೋಪಿತದಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 143 ರೆ/ವಿ 149 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಸದರಿ ಅಪರಾಧ ಮಾಡುವ ಸಮಾನ ಏಕೋದ್ದೇಶದಿಂದ, ಸದರಿ ಅಕ್ರಮ ಕೂಟ ಮುಂದುವರೆಸಿಕೊಂಡು, ಆರೋಪಿತರಾದ ನೀವುಗಳು ಬಂದು ದೊಂಬಿ ಮಾಡಿರುತ್ತೀರಿ, ಆ ಮೂಲಕ ಭಾರತ ದಂಡ ಸಂಹಿತೆ ಕಲಂ 147 ರೆ/ವಿ 149 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ , ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸದರಿ ಅಪರಾಧ ಮಾಡುವ ಸಮಾನ ಏಕೋದ್ದೇಶದಿಂದ, ಸದರಿ ಅಕ್ರಮ ಕೂಟ ಮುಂದುವರೆಸಿಕೊಂಡು, ಫಿರ್ಯಾದಿಯು ಬಳ್ಕೂರ ತಲಗೋಡ ರಸ್ತೆ ಮೇಲೆ ಬಂದಿದ್ದನ್ನು ನೋಡಿದ

ಆರೋಪಿತರಾದ ನೀವೆಲ್ಲರೂ ಫಿರ್ಯಾದಿಗೆ ಅಡ್ಡಗಟ್ಟಿ ತಡೆದಿರುತ್ತೀರಿ, ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 341 ರೆ/ವಿ 149 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸದರಿ ಅಪರಾಧ ಮಾಡುವ ಏಕೊದ್ದೇಶದಿಂದ, ಆರೋಪಿತರೆಲ್ಲರೂ ನೀವೆಲ್ಲರೂ ಫಿರ್ಯಾದಿಯನ್ನು ಕೈಯಿಂದ ದೂಡಿ ಹಾಕಿ ಅವಳಿಗೆ ಮಾನ ಭಂಗವನ್ನುಂಟು ಮಾಡಲು ಪ್ರಯತ್ನಿಸಿದ್ದೀರೆಂದು ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 354 ರೆ/ವಿ 149 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸದರಿ ಅಪರಾಧ ಮಾಡುವ ಏಕೋದ್ದೇಶದಿಂದ, ಅಕ್ರಮ ಗುಂಪು ಕಟ್ಟಿಕೊಂಡು ಫಿರ್ಯಾದಿಗೆ ಹಾಗೂ ಅವರ ತವರು ಮನೆಯವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ನೆಮ್ಮದಿಗೆ ಭಂಗ ತರುವಂತೆ ಪ್ರಚೋದಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 504 ರೆ/ವಿ 149 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ಅಪರಾಧ ಮಾಡುವ ಏಕೋದ್ದೇಶದಿಂದ, 1 ನೇ ಆರೋಪಿಯಾದ ನೀನು ಕಬ್ಬಿಣದ ರಾಡನಿಂದ ಫಿರ್ಯಾದಿಯ ಎಡ ಹೆಬ್ಬಳಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 324 ರೆ/ವಿ 149 ನೇ

ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಸದರಿ ಅಪರಾಧ ಮಾಡುವ ಏಕೋದ್ದೇಶದಿಂದ, ಆರೋಪಿತರಾದ ನೀವೆಲ್ಲರೂ ಫಿರ್ಯಾದಿಗೆ ಹಾಗೂ ಅವರ ತವರು ಮನೆಯವರಿಗೆ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 506 ರೆ/ವಿ 149 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ಓದಿ ತಿಳಿಸಿ ಹೇಳಿದ ನಂತರ ಆತ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕ: 18-05-2023 ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಸ್ಥಳ : ಹೊನ್ನಾವರ ಹೊನ್ನಾವರ